# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 152 / 2021

**ಚಾಸಾ ಃ- 1 / ಪ್ರಾಸಾ ಃ- 3**

| | |
|---|---|
| ಹೆಸರು | **ಶ್ರೀಕಾಂತ್ ಎಸ್** |
| ತಂದೆ ಹೆಸರು | **ಲೇಟ್ ಶಿವರಾಮು** |
| ವಯಸ್ಸು | **41** |
| ಉದ್ಯೋಗ | **ಪೋಲಿಸ್ ಇನ್ಸ್ ಪೆಕ್ಟರ್, ಕರ್ನಾಟಕ ಲೋಕಾಯುಕ್ತ ಬೆಂಗಳೂರು ನಗರ** |
| ವಿಳಾಸ | **ಬೆಂಗಳೂರು** |

**ದಿನಾಂಕಃ 29.03.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**
ನವೆಂಬರ್ 2020ರಿಂದ ಆಗಸ್ಟ್ 2022 ರವರೆಗೆ ಪಿ ಎಸ್ ಐ ಎಂದು ಮಾಗಡಿ ಪೋಲಿಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 12.12.2020 ರಂದು ಗ್ರಾಮಪಂಚಾಯ್ತಿ ಚುನಾವಣೆಯ ಹಿನ್ನೆಲೆಯಲ್ಲಿ ನಾನು ಮತ್ತು ಚಾಸಾ 4ರವರೊಂದಿಗೆ ಠಾಣಾ ಸರಹದ್ದಿನಲ್ಲಿ ಗಸ್ತಿನಲ್ಲಿ ಇರುವಾಗ ಮಾದಲಾರಯ್ಯನಪಾಳ್ಯ ಗ್ರಾದವ ರಾಮಕೃಷ್ಣಯ್ಯ ಎಂಬುವವರು ಅಕ್ರಮವಾಗಿ ಮದ್ಯವನ್ನು ಸಂಗ್ರಹಿಸಿಕೊಂಡು ಹೋಗುತ್ತಿದ್ದಾರೆ ಎಂದು ಖಚಿತ ಬಾತ್ಮಿ ಬಂದಿರುತ್ತದೆ. ಕೂಡದೆ ನಾನು ಚಾಸಾ 2 ಮತ್ತು 3 ರವರಿಗೆ ಸದರಿ ವಿಷಯವನ್ನು ತಿಳಿಸಿ ಸುಮಾರು 2.30 ಗಂಟೆಗೆ ಮದಲಾರಯ್ಯನಪಾಳ್ಯದ ಅರಳೀಮರದ ಬಳಿ ಹೋಗಿರುತ್ತೇವೆ. ಅಲ್ಲಿ ಒಬ್ಬ ಆಸಾಮಿಯು ನಾವು ಸಮವಸ್ತ್ರದಲ್ಲಿ ಇರುವುದನ್ನು ನೋಡಿ ಚೀಲವನ್ನು ಬಿಸಾಕಿ ಓಡಲು ಪ್ರಯತ್ನ ಮಾಡಿರುತ್ತಾನೆ. ಆಗ ಚಾಸಾ 4ರವರು ಆತನನ್ನು ಬೆನ್ನಟ್ಟಿ ಹಿಡಿದುಕೊಂಡು ಬಂದು ಏಕೆ ಓಡುತ್ತಿದ್ದೀಯಾ ಎಂದು ಹೆಸರು ಮತ್ತು ವಿಳಾಸ ಕೇಳಲಾಗಿ ಆತ ತನ್ನ ಹೆಸರು ರಾಮಕೃಷ್ಣಯ್ಯ 48 ವರ್ಷ , ಅಂಗಡಿ ವ್ಯಾಪಾರ , ಮದಲಾರಯ್ಯನಪಾಳ್ಯ ಎಂದು ತಿಳಿಸಿರುತ್ತಾನೆ. ನಂತರ ನಾವು ಆತನನ್ನು

ಸದರಿ ಚೀಲದಲ್ಲಿ ಏನು ಇದೆ ಎಂದು ಕೇಳಲಾಗಿ ಆತನು ಮದ್ಯದ ಬಾಟಲುಗಳು ಇರುತ್ತವೆ ಎಂದು ತಿಳಿಸಿರುತ್ತಾರೆ. ನಂತರ ಪಂಚರ ಸಮಕ್ಷಮ ಸದರಿ ಚೀಲವನ್ನು ತೆಗೆದು ನೋಡಲಾಗಿ ನಮಗೆ ಯಾವುದೇ ಪರವಾನಗಿ ಇಲ್ಲದ ಮದ್ಯ ಇರುವುದು ಕಂಡುಬಂದಿರುತ್ತದೆ. ಸದರಿ ಮದ್ಯ 90 ಎಂ ಎಲ್ ನ 75 ಹೈವಾರ್ಡ್ಸ್ ಪಂಚ್ 9ವಿಸ್ಕಿ, 90 ಎಂ ಎಲ್ ನ 35 ಬ್ಯಾಗ್‌ಪೇಪರ್ ಮತ್ತು 180 ಎಂ ಎಲ್ ನ 15 ಬ್ಯಾಗ್ ಪೇಪರ್ ಇದ್ದು ಸದರಿ ಮದ್ಯವನ್ನು ಏಕೆ ತೆಗೆದುಕೊಂಡು ಹೋಗುತ್ತಿದ್ದೀಯಾ ಎಂದು ಕೇಳಲಾಗಿ ಆತನು ನನ್ನದು ಅಂಗಡಿ ಇದ್ದು ಅಂಗಡಿಯಲ್ಲಿ ಮಾರಾಟ ಮಾಡಲು ತೆಗೆದುಕೊಂಡು ಹೋಗುತ್ತಿದ್ದೇನೆ ಎಂದು ನಿಜ ಹೇಳಿರುತ್ತಾನೆ. ಸದರಿ ಮದ್ಯವನ್ನು ತೆಗೆದುಕೊಂಡು ಹೋಗಲು ಹಾಗೂ ಮಾರಾಟ ಮಾಡಲು ಪರವಾನಗಿ ಇದೆಯೆ ಎಂದು ಕೇಳಲಾಗಿ ಯಾವುದೇ ಪರವಾನಗಿ ಇರುವುದಿಲ್ಲವೆಂದು ತಿಳಿಸಿರುತ್ತಾನೆ.

ನಂತರ ಸದರಿ ವ್ಯಕ್ತಿಯನ್ನು ವಶಕ್ಕೆ ಪಡೆದು 2.45 ರಿಂದ 3.30ರವರೆಗೆ ಮಹಜರ್ ಮುಖಾಂತರ ಎಲ್ಲಾ ಮದ್ಯವನ್ನು ಜಪ್ತಿ ಪಡಿಸಿಕೊಂಡು ಪಂಚನಾಮೆಯನ್ನು ಜರುಗಿಸಿರುತ್ತೇವೆ. ಈಗ ಸಾಕ್ಷಿಗೆ ನಿಪಿ-1 ಅನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಸದರಿ ಜಪ್ತಿ ಪಡಿಸಿಕೊಂಡ ಮದ್ಯದ ಟೆಟ್ರಾ ಪ್ಯಾಕುಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಗೆ 90 ಎಂ ಎಲ್ ನ 75 ಹೈವಾರ್ಡ್ಸ್ ಪಂಚ್ ಟೆಟ್ರಾ ಪ್ಯಾಕುಗಳನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ್ದು ಒಟ್ಟಾಗಿ ಮುದ್ದೆಮಾಲು 1 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ 90 ಎಂ ಎಲ್ ನ 35 ಬ್ಯಾಗ್ ಪೇಪರ್ ಟೆಟ್ರಾ ಪ್ಯಾಕುಗಳನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ್ದು ಒಟ್ಟಾಗಿ ಮುದ್ದೆಮಾಲು 2 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ 180 ಎಂ ಎಲ್ ನ 15 ಬ್ಯಾಗ್ ಪೇಪರ್ ಟೆಟ್ರಾ ಪ್ಯಾಕುಗಳನ್ನು ತೋರಿಸಲಾಗಿ ನೋಡಿ ಗುರುತಿಸಿದ್ದರಿಂದ ಅವುಗಳನ್ನು ಒಟ್ಟಾಗಿ ಮುದ್ದೆಮಾಲು 3 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಬಿಳಿ ಬಣ್ಣದ ಚೀಲವನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಸದರಿ ಚೀಲವನ್ನು ಮುದ್ದೆಮಾಲು 4 ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಯು ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ನಂತರ ಸಂಜೆ 4.00 ಗಂಟೆಗೆ ಆರೋಪಿ ಹಾಗೂ ಜಪ್ತಿ ಪಡಿಸಿಕೊಂಡ ಮದ್ಯದ ಪ್ಯಾಕುಗಳೊಂದಿಗೆ ಠಾಣೆಗೆ ಹಾಜರಾಗಿ ಚಾಸಾ 5 ರವರಿಗೆ ಒಂದು ವರಧಿಯನ್ನು ನೀಡಿರುತ್ತೇನೆ. ಈಗ ಸಾಕ್ಷಿಗೆ ಸದರಿ ದೂರನ್ನು ತೋರಿಸಲಾಗಿ ನೋಡಿ ಗುರುತಿಸಿದ್ದರಿಂದ ದೂರನ್ನು ನಿಪಿ-4 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ದಿನಾಂಕ 13.12.2020 ರಂದು ಪ್ರಕರಣದಲ್ಲಿ ವಶಪಡಿಸಿಕೊಂಡಂತ ಮದ್ಯದ ಮಾಲನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಲು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ.

ದಿನಾಂಕ 25.01.2021 ರಂದು ತನಿಖೆಯನ್ನು ಮುಂದುವರೆಸಿ ಆರೋಪಿಯ ವಿರುದ್ದ ಕಲಂ 32 ಮತ್ತು 34 ಕರ್ನಾಟಕ ಅಬಕಾರಿ ಕಾಯ್ದೆ ಅಡಿ ಆರೋಪ ಸಾಭೀತಾದ ಕಾರಣ ಪ್ರಕರಣದಲ್ಲಿ ಎಫ್ ಎಸ್ ಎಲ್ ವರಧಿ ಬಾಕಿ ಇರಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರಧಿಯನ್ನು ಸಲ್ಲಿಸಿರುತ್ತೇನೆ.

ದಿನಾಂಕ 05.08.2021 ರಂದು ವಿಧಿವಿಜ್ಞಾನ ಪ್ರಯೋಗಾಲಯದಿಂದ ರಾಸಾಯನಿಕ ವರಧಿಯನ್ನು ಪಡೆದು ಮಾನ್ಯ ನ್ಯಾಯಾಲಯಕ್ಕೆ ಹೆಚ್ಚುವರಿ ವರಧಿಯನ್ನು ಸಲ್ಲಿಸಿರುತ್ತೇನೆ. ಈಗ ಸಾಕ್ಷಿಗೆ ಸದರಿ ವರದಿ ಮತ್ತು ಎಫ್ ಎಸ್ ಎಲ್ ವರಧಿಯನ್ನು ತೋರಿಸಲಾಗಿ ಅದರಲ್ಲಿಃರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ವರಧಿಯನ್ನು ನಿಪಿ-5 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಹಾಗೂ ಎಫ್ ಎಸ್ ಎಲ್ ವರಧಿಯನ್ನು ನಿಪಿ-6 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು .

**ಪಾಟೀ ಸವಾಲು** ಃ- ಆರೋಪಿ ಪರ **ಸಿ ಕೆ ಆರ್ ವಕೀಲರಿಂದಃ**

ಈ ಹಂತದಲ್ಲಿ ಪಾಟೀಸವಾಲಿಗೆ ಮಧ್ಯಾಹ್ನ 3.00 ಗಂಟೆಗೆ ಮುಂದೂಡಲಾಯಿತು.

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**

**ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 152 / 2021**

**ಚಾಸಾ ಃ- 1 / ಪ್ರಾಸಾ ಃ- 3**

**ದಿನಾಂಕಃ 29.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಃ- ಆರೋಪಿ ಪರ ಸಿ ಕೆ ಆರ್ ವಕೀಲರಿಂದಃ**

ಈ ಪ್ರಕರಣದಲ್ಲಿ ಪಿರ್ಯಾದುದಾರರು ನೀವು ಹಾಗೂ ತನಿಖಾಧಿಕಾರಿಯು ನೀವೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ 4 ಮತ್ತು 5 ರವರು ನಿಮ್ಮ ಕೈಕೆಳಗೆ ಕೆಲಸ ಮಾಡುತ್ತಿರುವುದು ಎಂದರೆ ಸಾಕ್ಷಿ ಹೌದು ಎಂದು ನುಡಿಯುುತ್ತಾರೆ. ನೀವು ಯಾವ ಸ್ಥಳದಲ್ಲಿ ಇದ್ದಾಗ ನಿಮಗೆ ಮಾಹಿತಿ ಬಂದಿರುತ್ತದೆ ಎಂದರೆ ಸಾಕ್ಷಿಯು ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ನಿಮಗೆ ಮಾಹಿತಿಯು ಪೋನಿನಲ್ಲಿ ಬಂದಿರುತ್ತದೆಯೋ ಅಥವಾ ಖುದ್ದಾಗಿ ತಿಳಿಸಿರುತ್ತಾರೋ ಎಂದರೆ ಸಾಕ್ಷಿ ನೆನಪು ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಪಿರ್ಯಾದಿಯಲ್ಲಿ ಮಾಹಿತಿಯು ಮೌಖಿಕವಾಗಿ ಬಂದಿರುತ್ತದೆಯೋ ಅಥವಾ ಪೋನ್ ಮುಖಾಂತರ ಬಂದಿರುತ್ತದೆಯೋ ಎಂದು ತಿಳಿಸಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ2 ಮತ್ತು 3 ರವರು ಎಲ್ಲಿ ಇದ್ದರು ಎಂದರೆ ಸಾಕ್ಷಿ ನಾವು ಗಸ್ತು ಮಾಡುತ್ತಿದ್ದಾಗ ಅವರು ಇದ್ದರು ಅವರನ್ನು ನಾವೇ ಕರೆದುಕೊಂಡು ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಚಾಸಾ 2 ಮತ್ತು 3 ರವರನ್ನು ಎಲ್ಲಿಂದ ಕರೆದುಕೊಂಡು ಹೋಗಿರುತ್ತೀರಿ ಎಂದರೆ ಸಾಕ್ಷಿ ಈಗ ಖಚಿತವಾದ ಸ್ಥ,ಳ ನನಗೆ ನೆನಪು ಇರುವುದಿಲ್ಲ ಎಂದು ನುಡಿಯುತ್ತಾರೆ. ಚಾಸಾ 2 ರವರು ಅರಳೀಕಟ್ಟೆ ದೊಡ್ಡಿ , ಮಾಡಬಾಳ್ ಹೋಬಳಿಯವರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ 3 ರವರು ಕಲ್ಯಾ ಗೇಟ್ ಮಾಗಡಿ ಟೌನ್ ನವರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅರಳೀಕಟ್ಟೆ ದೊಡ್ಡಿಯಿಂದ ಮಾಗಡಿಗೆ ಸುಮಾರು 10-15 ಕಿ.ಮೀ. ಆಗುತ್ತದೆಯೇ ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಕಲ್ಯಾ ಗೇಟ್ ನಿಂದ

ಮೊದಲಾರಯ್ಯನಪಾಳ್ಯಕ್ಕೆ ಎಷ್ಟು ಕಿ.ಮೀ. ಎಂದರೆ ಸಾಕ್ಷಿಯು 6-7 ಕಿ.ಮೀ. ಎಂದು ನುಡಿಯುತ್ತಾರೆ.

ಚಾಸಾ 2 ಮತ್ತು 3 ರವರಿಗೆ ಸ್ಥ,ಳ ಮಹಜರ್ ಗೆ ಸಹಕರಿಸಿ ಎಂದು ನೋಟೀಸ್ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಮಗೆ ಮಾಹಿತಿ ಬಂದ ನಂತರ ಸ್ಥ,ಳಕ್ಕೆ ಹೊರಟಾಗ ಎಷ್ಟು ಗಂಟೆ ಆಗಿತ್ತು ಎಂದರೆ ಸಾಕ್ಷಿಯು 2.15 ಆಗಿದ್ದಿರಬಹುದು ಎಂದು ನುಡಿಯುತ್ತಾರೆ. ನಿಮಗೆ ಮಾಹಿತಿ ಬಂದ ಸ್ಥಳದಿಂದ ಸದರಿ ಮೊದಲಾರಯ್ಯನಪಾಳ್ಯಕ್ಕೆ ಎಷ್ಟು ಕಿ.ಮೀ. ಎಂದರೆ ಸಾಕ್ಷಿ 10 ಕಿ.ಮೀ. ಎಂದು ನುಡಿಯುತ್ತಾರೆ. ನಿಮ್ಮ ಪಿರ್ಯಾದಿಯಲ್ಲಿ ಮಾಹಿತಿ ಸ್ಥ,ಳದಿಂದ ನಾವು 2 .15 ಗಂಟೆಗೆ ಬಿಟ್ಟಿರುತ್ತೇವೆ ಎಂದು ಬರೆದಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಮೊದಲಾರಯ್ಯನಪಾಳ್ಯಕ್ಕೆ ನೀವು ಎಷ್ಟು ಗಂಟೆಗೆ ತಲುಪಿರುತ್ತೀರಿ ಎಂದರೆ ಸಾಕ್ಷಿ 2.30 ಗಂಟೆಗೆ ಎಂದು ನುಡಿಯುತ್ತಾರೆ. ನಿಮಗೆ ಮಾಹಿತಿ ಬಂದ ನಂತರ ನೇರವಾಗಿ ಮೊದಲಾರಯ್ಯನಪಾಳ್ಯಕ್ಕೆ ಹೋಗಿರುತ್ತೀರೋ ಅಥವಾ ಬೇರೆ ಬೇರೆ ಗ್ರಾಮಗಳಿಗೆ ಹೋಗಿರುತ್ತೀರೋ ಎಂದರೆ ಸಾಕ್ಷಿ ಖಚಿತಪಡಿಸಿಕೊಳ್ಳಲು ಪಂಚರನ್ನು ಕರೆದುಕೊಂಡು ಬೇರೆ ಬೇರೆ ಗ್ರಾಮಗಳಿಗೆ ಹೋಗಿರಬಹುದು ಎಂದು ನುಡಿಯುತ್ತಾರೆ. ಯಾವ ಯಾವ ಗ್ರಾಮಗಳು ಎಂದು ಹೇಳಲು ಬರುತ್ತದೆಯೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಮೊದಲಾರಯ್ಯನಪಾಳ್ಯಕ್ಕೆ ಹೋಗಬೇಕಾದರೆ ಮೊದಲು ದುಬ್ಬಗಟ್ಟಿಗೆ ಗ್ರಾಮ ಬರುತ್ತದೆ ಎಂದರೆ ಸಾಕ್ಷಿ ನನಗೆ ಮೊದಲಾರಯ್ಯನಪಾಳ್ಯ ನೆನಪಿಗೆ ಬರುತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಅರಳೀಮರದ ಸುತ್ತಲು ವಾಸದ ಮನೆಗಳು ಇವೆ ಎಂದರೆ ಸಾಕ್ಷಿ ಸುತ್ತ ಮುತ್ತ ಯಾವುದೂ ಮನೆ ಇರುವುದಿಲ್ಲ ಜಮೀನುಗಳು ಇರುತ್ತವೆ ಎಂದು ನುಡಿಯುತ್ತಾರೆ. ಸದರಿ ಅರಳೀಮರದ ಎಷ್ಟು ದೂರದಲ್ಲಿ ಮನೆಗಳು ಬರುತ್ತವೆ ಎಂದರೆ ಸಾಕ್ಷಿ ನೆನಪು ಇರುವುದಿಲ್ಲ ಎಂದು ನುಡಿಯುತ್ತಾರೆ.

ನಿಮಗೆ ಮಾಹಿತಿ ಬಂದಾಗ ಸದರಿ ಮೊದಲಾರಯ್ಯನಪಾಳ್ಯಕ್ಕೆ ಹೋಗಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ

ಮೊದಲಾರಯ್ಯನಪಾಳ್ಯದ ಗ್ರಾಮದಲ್ಲಿ ವಾಸದ ಮನೆಗಳು ಇವೆಯೆ ಎಂದರೆ ಸಾಕ್ಷಿ ಇವೆ ಎಂದು ನುಡಿಯುತ್ತಾರೆ. ಮೊದಲಾರಯ್ಯನಪಾಳ್ಯದ ಗ್ರಾಮದವರನ್ನು ಪಂಚನಾಮೆಗೆ ಸಹಕರಿಸಿ ಎಂದು ಕೇಳಿರುತ್ತೀರಾ ಹಾಗೂ ಅವರ ಹೇಳಿಕೆಯನ್ನು ಪಡೆದಿರುತ್ತೀರಾ ಎಂದರೆ ಸಾಕ್ಷಿ ನಾನು ಮೊದಲೇ ಪಂಚರನ್ನು ಕರೆದುಕೊಂಡು ಬಂದಿದ್ದೆನು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಸದರಿ ಗ್ರಾಮದವರನ್ನು ವಿಚಾರಣೆ ಮಾಡಿರುತ್ತೇವೆ ಆದರೆ ಯಾರೂ ಹೇಳಿಕೆ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಪಿರ್ಯಾದಿಯಲ್ಲಿ ಹಾಗೂ ಮಹಜರ್ ನಲ್ಲಿ ನಾವು ಗ್ರಾಮಸ್ಥರನ್ನು ವಿಚಾರಣೆ ಮಾಡಿರುತ್ತೇವೆ ಆದರೆ ಯಾರೂ ಹೇಳಿಕೆ ಕೊಟ್ಟಿರುವುದಿಲ್ಲ ಎಂದು ನಮೂದಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ನಿಮಗೆ ಮಾಹಿತಿ ಬಂದ ಸಮಯದಲ್ಲಿ ಚುನಾವಣೆ ಸಮಯ ಎಂದರೆ ಸಾಕ್ಷಿ ಅದಕ್ಕಾಗಿ ಗಸ್ತು ಮಾಡುತ್ತಿದ್ದೆವು ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನೀತಿಸಂಹಿತೆ ಜಾರಿ ಇತ್ತು ಎಂದರೆ ಸಾಕ್ಷಿ ನೀತಿಸಂಹಿತೆ ಜಾರಿಯಲ್ಲಿ ಇದ್ದಿರಲಿಲ್ಲ ಆದರೆ ಚುನಾವಣೆ ಹತ್ತಿರ ಇತ್ತು ಎಂದು ನುಡಿಯುತ್ತಾರೆ. ನೀತಿ ಸಂಹಿತೆ ಜಾರಿಯಲ್ಲಿ ಇತ್ತು ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಚುನಾವಣೆಯ ಪ್ರಯುಕ್ತಶ ಮಾಗಡಿಯ ಸುತ್ತ ಮುತತ 5 ಕಡೆಗಳಲ್ಲಿ ಚುನಾವಣ ಚೆಕ್ ಪೋಸ್ಟ್ ಗಳನ್ನು ಅಳವಡಿಸಿದ್ದರು ಎಂದರೆ ಸಾಕ್ಷಿ ಸಾಮಾನ್ಯವಾಗಿ ಚುನಾವಾಣೆ ಸಮಯದಲ್ಲಿ ಅಳವಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಮೊದಲಾರಯ್ಯನಪಾಳ್ಯಕ್ಕೆ ಹೋಗಬೇಕಾದರೆ ನೋಂದಣಿ ಕಛೇರಿಯಿಂದ ಬೈಚಾಪುರ ಮಾರ್ಗವಾಗಿ ಹೋಗಬೇಕು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ನೋಂದಣಿ ಕಛೇರಿ ಬಳಿ ಚುನಾವಣಾ ಚೆಕ್ ಪೋಸ್ಟ್ ಇರುತ್ತದೆ ಎಂದರೆ ಸಾಕ್ಷಿ ನನಗೆ ನೆನಪು ಇರುವುದಿಲ್ಲ ಎಂದು ನುಡಿಯುತ್ತಾರೆ.

ಮುದ್ದೆಮಾಲು 1 ರಿಂದ 3 ಅನ್ನು ಆರೋಪಿಯು ಯಾವ ಅಂಗಡಿಯಿಂದ ತಂದಿರುತ್ತಾರೆ ಎಂದು ವಿಚಾರಣೆ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು

ನುಡಿಯುತ್ತಾರೆ. ಸದರಿ ಮುದ್ದೆಮಾಲು 1 ರಿಂದ 3 ಯಾವ ಅಂಗಡಿಗೆ ಸೇರಿರುತ್ತದೆ ಎಂದು ತನಿಖೆಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮುದ್ದೆಮಾಲು 1 ರಿಂದ 3 ಬ್ರಾಂಡಿ ಅಥವಾ ವಿಸ್ಕಿ ಎಂದು ಜಪ್ತಿ ಪಂಚನಾಮೆಯಲ್ಲಿ ಅಥವಾ ಪಿಎಫ್ ನಲ್ಲಿ ನಮೂದು ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ 1 ರಿಂದ 3 ಮುದ್ದೆಮಾಲು ಗಳ ಉತ್ಪಾದನೆಯ ದಿನಾಂಕ , ಬ್ಯಾಚ್ ನಂಬರ್ ಮತ್ತು ಎಕ್ಸ್ಪೈರಿ ದಿನಾಂಕವನ್ನು ನಮೂದದು ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಹೈವಾರ್ಡ್ ಪಂಚ್ ವಿಸ್ಕಿ ಇರುತ್ತದೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ನೀವು ಜಪ್ತಿ ಪಡಿಸಿಕೊಂಡಿರುವ ಮುದ್ದೆಮಾಲುಗಳಲ್ಲಿ ಹೈವಾರ್ಡ್ಸ್ ಪಂಚ್ ವಿಸ್ಕಿ ಯಾವುದು ಎಂದರೆ ಸಾಕ್ಷಿ ಈಗ ಮುದ್ದೆಮಾಲು 1 ರಲ್ಲಿ ಇರುವ ಟೇಟ್ರಾ ಪ್ಯಾಕನ್ನು ತೋರಿಸಿರುತ್ತಾರೆ. ಈಗ ಸಾಕ್ಷಿಗೆ ಮುದ್ದೆಮಾಲು 1ರ 1 ಟೆಟ್ರಾ ಪ್ಯಾಕನ್ನು ತೋರಿಸಲಾಗಿ ಸದರಿ ಟೆಟ್ರಾ ಪ್ಯಾಕ್ ಮ್ಯಾಕ್ ಡೊವೆಲ್ ನಂ.1ರ ಟೆಟ್ರಾ ಪ್ಯಾಕ್ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮ್ಮ ಪಿಎಫ್ ನಲ್ಲಿ ಬ್ರಾಂಡಿ ಎಂದು ನಮೂದು ಇರುವುದಿಲ್ಲ ಎಂದರೆ ಸಾಕ್ಷಿ ನಾವು ಮ್ಯಾಕ್ ಡೊವೆಲ್ ನಂ.1ರ ಬ್ರಾಂಡಿ ಸೀಜ್ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಮುದ್ದೆಮಾಲು 4 ರಲ್ಲಿ ನೀವು ಪಂಚರ ಸಹಿ ಪಡೆದಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಮೊದಲಾರಯ್ಯನಪಾಳ್ಯದಲ್ಲಿ ಆರೋಪಿಯು ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಸದರಿ ಮೊದಲಾರಯ್ಯನಪಾಳ್ಯದ ಗ್ರಾಮಸ್ಥರು ನಿಮಗೆ ಲಿಖಿತವಾಗಿ ದೂರನ್ನು ಕೊಟ್ಟಿದ್ದರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ 1 ರಿಂದ 3 ಮದ್ಯದ ಟೆಟ್ರಾ ಪ್ಯಾಕುಗಳು ಸಾಮಾನ್ಯವಾಗಿ ಎಲ್ಲಾ ವೈನ್ ಸ್ಟೋರ್ ಗಳಲ್ಲಿ ಸಿಗುತ್ತವೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ಹೇಳುವಂತೆ ಆರೋಪಿಯು ಅಕ್ರಮವಾಗಿ ಯಾವುದೇ ಮದ್ಯ ಮಾರಾಟ ಮಡುತ್ತಿದ್ದಿರಲಿಲ್ಲ ನಿಮ್ಮ ಅಂಕಿ ಅಂಶಕ್ಕೋಸ್ಕರ ಆರೋಪಿ ವಿರುದ್ದ ಒಂದು ಸುಳ್ಳು ದೂರನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಯಾವುದೇ ಸ್ಥ,ಳಕ್ಕೆ

ಹೋಗಿರುವುದಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಜಪ್ತಿ ಪಡಿಸಿಕೊಂಡಿರುವುದಿಲ್ಲ ಮುದ್ದೆಮಾಲು 1 ರಿಂದ 4 ನ್ನು ಈ ಕೇಸಿಗೋಸ್ಕರ ಸೃಷ್ಟಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ಠಾಣೆಯಲ್ಲೆ ಮಹಜರನ್ನು ತಯಾರಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ ಆರೋಪಿಯು ಯಾವುದೇ ತಪ್ಪನ್ನು ಮಾಡದೇ ಇದ್ದರೂ ಒಂದು ಸುಳ್ಳು ದೋಷಾರೋಪಣ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೀರ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**